# ಉಪ್ಪು, ಉಪ್ಪಿನ ಕಾಯಿ ಒಂದು ಜಿಲೇಬಿ



ಮದುವೆಯ ದಿಬ್ಬಣ ನಿನ್ನೆ ಹೊರಟು
ಇಂದು ಕಲ್ಯಾಣ ಮಂಟಪದಲ್ಲಿ ನಿಂತಿತು

ಝುರೀ ಪಂಚೆಯ ಅಪ್ಪ ಅಪರಿಚಿತರಿಗೂ
ಕೈ ಕುಲುಕಿ ಸ್ವಾಗತ ಮಾಡಿ
ಒಳಕರೆಯುತ್ತಾನೆ

ಮನಸ್ಸಿಲ್ಲದಿದ್ದರು ರೇಷ್ಮೆ ಸೀರೆಯುಟ್ಟ ಅಮ್ಮ
ಮಾತನಾಡುತ್ತಾಳೆ ಮನಸ್ತಾಪವಿದ್ದರೊಡನೆಯೂ
ಮನಬಿಚ್ಚಿ

ಬದುಕಿನ ಜಂಜಾಟದಲ್ಲಿ ನಿವೃತ್ತಿ ಕಂಡ
ಮುದಿ ದಂಪತಿಗಳು ನಡುವಲ್ಲಿ ಕೂತು
ತಮ್ಮ ಹರೆಯವನ್ನು ನೆನೆದು
ಮರಳಿ ಸವಿಯಲೆತ್ನಿಸುತ್ತಾರೆ

ಮದುವೆಗೆಂದೆ ಅಡವಿಟ್ಟ ಅಮ್ಮನ
ಬೆಂಡೋಲೆಗಳು ಗೋಳಾಡುತ್ತಿವೆ
ಮಾರ್ವಾಡಿ ಅಂಗಡಿಯ ಗಾಜಿನ ಡಬ್ಬಿಯ ಒಳಗೆ

ಐದಾರು ಸೊನ್ನೆಯ ಸಾಲ ನೆನೆದು
ಒದ್ದೆಯಾಗುತ್ತದೆ ಔಪಚಾರಿಕ ನಗುವಿನೊಂದಿಗೆ
ಅಪ್ಪನ ಅಮಾಯಕ ಕಣ್ಣು

ಮತ್ಯಾರಿಗೋ ಕೈ ಬೀಸಿ ಕರೆಯುತ್ತಿದೆ
ಕಲ್ಯಾಣ ಮಂಟಪದ ವಧುವಿನ ಕೊಠಡಿ
ಮುಟ್ಟದೆಯೇ ಮೈಲಿಗೆಯಾಗಿತ್ತು
ಊಟದ ಎಲೆಯ ಮೇಲಿನ
ಉಪ್ಪು, ಉಪ್ಪಿನಕಾಯಿ, ಒಂದುಜಿಲೇಬಿ

ನಡುವೆ
ಆರತಕ್ಷತೆಯ ಛಾಯಾಚಿತ್ರಕ್ಕೆ
ಮೈಸೋಕಿಸಿ ನಿಲ್ಲುವ ವಧುವರರಿಗೆ
ಮೊದಲ ಬಾರಿ ಆಗುವ ಪ್ರೀತಿ
ಅಪಾರ.

• **ಸಂದೀಪ್ ಈಶಾನ್ಯ**